ದಿನಾಂಕಃ 05-01-2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲುಃ 3 ಮತ್ತು 4 ನೇ ಪ್ರತಿವಾದಿಯರ ಪರ ಶ್ರೀ ಡಿ ಎಸ್ ಆರ್ ವಕೀಲರಿಂದಃ

ವೆಂಕಟರಮಣಪ್ಪ ಮತ್ತು ತಿಮ್ಮರಾಯಪ್ಪ ಅಣ್ಣ ತಮ್ಮಂದಿರು. ಅವರ ತಂದೆಯ ಹೆಸರು ಗವಿಯಪ್ಪ. ಅವರು ನಮ್ಮ ಸಂಬಂಧಿ ಅಲ್ಲ. ವೆಂಕಟರಮಣಪ್ಪ ಮತ್ತು ತಿಮ್ಮರಾಯಪ್ಪ ನಮ್ಮ ಊರಿನವರು. ಭಾಗ್ಯಮ್ಮ ವೆಂಕಟರಮಣಪ್ಪನ ಮಗಳು. ಅವಳ ಮದುವೆಯಾಗಿ 25-30 ವರ್ಷ ಆಗಿದೆ. ಗವಿಯಪ್ಪರವರಿಗೆ 7-8 ಐಟಂ ಸ್ವತ್ತುಗಳು ಇದ್ದವು. ಹೆಚ್ಚಿನ ಆಸ್ತಿಗಳು ಮಧುಗಿರಿಯಲ್ಲಿ ಇದ್ದವು ಇನ್ನು ಕೆಲವು ಬೇರೆ ಊರಲ್ಲಿ ಇದ್ದವು. ಯಾವ ಊರಿನಲ್ಲಿ ಇದ್ದವು ನನಗೆ ಗೊತ್ತಿಲ್ಲ. ಸದರಿ ಸ್ವತ್ತುಗಳ ಸರ್ವೆ ನಂ, ವಿಸ್ತೀರ್ಣ ಮತ್ತು ಚಕ್ ಬಂದಿ ಗೊತ್ತಿಲ್ಲ. ಸದರಿ ಸ್ವತ್ತುಗಳು ಗವಿಯಪ್ಪನ ಪಿತ್ರಾರ್ಜಿತ ಸ್ವತ್ತುಗಳು. ವೆಂಕಟರಮಣಪ್ಪ ಮತ್ತು ತಿಮ್ಮರಾಯಪ್ಪ ಜಂಟಿ ಕುಟುಂಬದಲ್ಲಿ ಇದ್ದರು ಮತ್ತು ದಾವಾ ಸ್ವತ್ತುಗಳನ್ನು ಜಂಟಿಯಾಗಿ ಅನುಭವಿಸುತ್ತಿದ್ದರು ಎಂದು ತೋರಿಸಲು ದಾಖಲಾತಿ ಇರುವ ಬಗ್ಗೆ ನನಗೆ ಗೊತ್ತಿಲ್ಲ ಗವಿಯಪ್ಪರವರಿಗೆ ಯಾವುದೇ ಪಿತ್ರಾರ್ಜಿತ ಸ್ವತ್ತುಗಳು ಇರಲಿಲ್ಲ ಎಂದರೆ ಸರಿಯಲ್ಲ. ಗವಿಯಪ್ಪರವರಿಗೆ ಸರ್ವೆ ನಂ 18, 45/2 ಮತ್ತು ಒಂದು ಮನೆ ಮಾತ್ರ ಇತ್ತು ಎಂದರೆ ಸರಿಯಲ್ಲ. ಸದರಿ 3 ಐಟಂ ಸ್ವತ್ತುಗಳು ಗವಿಯಪ್ಪನ ಸ್ವಯಾರ್ಜಿತ ಸ್ವತ್ತುಗಳು ಎಂದರೆ ಸರಿಯಲ್ಲ.

ಗವಿಯಪ್ಪ ಈ ಮೇಲಿನ 3 ಸ್ವತ್ತುಗಳನ್ನು ತನ್ನ ಮಕ್ಕಳಾದ ವೆಂಕಟರಮಣಪ್ಪ ಮತ್ತು

ತಿಮ್ಮರಾಯಪ್ಪರವರಿಗೆ ವಿಲ್ ಮೂಲಕ ಬರೆದು ಇಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಗವಿಯಪ್ಪನ ಮರಣಾನಂತರ ವಿಲ್ ಪ್ರಕಾರ ವೆಂಕಟರಮಣಪ್ಪ ಮತ್ತು ತಿಮ್ಮರಾಯಪ್ಪ ಅವರವರ ಸ್ವತ್ತುಗಳಲ್ಲಿ ಪ್ರತ್ಯೇಕ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ವಿಲ್ ಪ್ರಕಾರ ಅವರ ಹೆಸರಿಗೆ ಖಾತೆ ಪಹಣಿ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಭಾಗ್ಯಮ್ಮ ವೆಂಕಟರಮಣಪ್ಪನ ಮಗಳು. ಭಾಗ್ಯಮ್ಮನ ಗಂಡ ಅವಳನ್ನು ಬಿಟ್ಟು ಬೇರೆ ಒಬ್ಬಳನ್ನು ಮದುವೆ ಆಗಿದ್ದಾಳೆ ಎಂದರೆ ಸರಿ. ಅಂದಿನಿಂದ ಭಾಗ್ಯಮ್ಮ ತಂದೆ ಜೊತೆ ವಾಸ ಇದ್ದಳು ಎಂದರೆ ಸಾಕ್ಷಿ ಒಟ್ಟು ಕುಟುಂಬದಲ್ಲಿ ವಾಸ ಇದ್ದಳು ಎಂದು ಹೇಳುತ್ತಾರೆ. ತನಗೆ ವಿಲ್ ಮೂಲಕ ಬಂದಿದ್ದ ಸ್ವತ್ತುಗಳನ್ನು ವೆಂಕಟರಮಣಪ್ಪ ತನ್ನ ಒಬ್ಬಳೇ ಮಗಳು ಭಾಗ್ಯಮ್ಮರವರಿಗೆ ವಿಲ್ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ವೆಂಕಟರಮಣಪ್ಪನ ಮರಣಾನಂತರ ಭಾಗ್ಯಮ್ಮ ವಿಲ್ ಪ್ರಕಾರ ಖಾತೆ ಪಹಣಿ ಮಾಡಿಸಿಕೊಂಡು ಸದರಿ ಸ್ವತ್ತುಗಳ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ.

ಭಾಗ್ಯಮ್ಮ ದಾವಾ ಐಟಂ ನಂ 4 ರಿಂದ 6 ನೇ ಸ್ವತ್ತುಗಳನ್ನು 3 ಮತ್ತು 4 ನೇ ಪ್ರತಿವಾದಿಯರಿಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಅಂದಿನಿಂದ ಸದರಿ ಸ್ವತ್ತಗಳಲ್ಲಿ 3 ಮತ್ತು 4 ನೇ ಪ್ರತಿವಾದಿಯರು ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಭಾಗ್ಯಮ್ಮ ಮಾರಾಟ ಮಾಡಿರುವ ದಾವಾ ಐಟಂ ನಂ 4 ರಿಂದ 6 ಸ್ವತ್ತುಗಳಲ್ಲಿ ವಾದಿಯರು ಮತ್ತು ತಿಮ್ಮರಾಯಪ್ಪನ ಮಕ್ಕಳಿಗೆ ಯಾವುದೇ ಹಕ್ಕು ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ಮಾರಾಟ ಮಾಡಿದ ಸ್ವತ್ತುಗಳನ್ನು ದಾವೆಯಲ್ಲಿ ಸೇರಿಸಿ ಸುಳ್ಳು ದಾವೆ ಸಲ್ಲಿಸಿದ್ದಾರೆ ಎಂದರೆ

ಸರಿಯಲ್ಲ. ವಾದಿಯರಿಗೆ ಅನುಕೂಲ ಆಗಲಿ ಎಂದು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ 5 ನೇ ಪ್ರತಿವಾದಿ ಪರ ಶ್ರೀ ಜಿ ಬಿ ಹೆಚ್ ವಕೀಲರು

ಗವಿಯಪ್ಪರವರನ್ನು ನಾನು ನೋಡಿದ್ದೇನೆ. ಕೊನೆಯ ಬಾರಿ ಗವಿಯಪ್ಪರವರನ್ನು ನಾನು ನೋಡಿ ಎಷ್ಟು ವರ್ಷ ಆಯಿತು ಹೇಳಲು ಆಗುವುದಿಲ್ಲ. ಗವಿಯಪ್ಪನ ಗಂಡನ ಹೆಸರು ಗಂಗಮ್ಮ. ಅವರಿಗೆ ಇಬ್ಬರು ಹೆಣ್ಣು ಮಕ್ಕಳು. ಅವರುಗಳೆಂದರೆ ಜಯಮ್ಮ ಮತ್ತು ನಂಜುಮ್ಮ. ಜಯಮ್ಮರವರನ್ನು ಯಾವ ಊರಿಗೆ ಕೊಟ್ಟು ಮದುವೆ ಮಾಡಿದ್ದಾರೆ ನನಗೆ ಗೊತ್ತಿಲ್ಲ. ನಂಜಮ್ಮರವರನ್ನು ಮಧುಗಿರಿಗೆ ಕೊಟ್ಟು ಮದುವೆ ಮಾಡಿದ್ದಾರೆ. ಜಯಮ್ಮನ ಗಂಡನ ಬಗ್ಗೆ ಮತ್ತು ಮಕ್ಕಳ ಬಗ್ಗೆ ನನಗೆ ಗೊತ್ತಿಲ್ಲ. ನಂಜಮ್ಮನ ಗಂಡನ ಹೆಸರು ನೆನಪಿಲ್ಲ. ನಂಜಮ್ಮನ ಮಗಳ ಹೆಸರು ಭಾಗ್ಯಮ್ಮ.

ವೆಂಕಟರಮಣಪ್ಪ ವಾಸ ಇದ್ದ ಮನೆಯ ವಿಸ್ತೀರ್ಣ ಮತ್ತು ಚಕ್ ಬಂದಿ ಗೊತ್ತಿಲ್ಲ. ತಿಮ್ಮರಾಯಪ್ಪನ ಮನೆಯ ವಿಸ್ತೀರ್ಣ ಮತ್ತು ಚಕ್ ಬಂದಿ ಕೇಳಲಾಗಿ ಎಲ್ಲರೂ ಒಂದೇ ಮನೆಯಲ್ಲಿದ್ದರು ಎಂದು ಹೇಳುತ್ತಾರೆ. ವಾದಿಯರು ಎಷ್ಟು ಮನೆಗಳಿಗೆ ಸಂಬಂಧಪಟ್ಟಂತೆ ಈ ದಾವೆ ಸಲ್ಲಿಸಿದ್ದಾರೆ ನನಗೆ ಗೊತ್ತಿಲ್ಲ. ಗವಿಯಪ್ಪರವರಿಗೆ 3-4 ಅಂಗಡಿ 2-3 ಮನೆ ಇದ್ದವು. ಒಂದು ಮನೆಯಿಂದ ಇನ್ನೊಂದು ಮನೆ ಎಷ್ಟು ದೂರದಲ್ಲಿದ್ದವು ಹೇಳಲು ಆಗುವುದಿಲ್ಲ. ಮೊದಲು ಹಂಚಿನ ಮನೆ ಇದ್ದವು, ನಂತರ ಶೀಟ್ ಹಾಕಿದರು ಈಗ

R.C.C ಮನೆಗಳು ಆಗಿವೆ. R.C.C ಮನೆಗಳನ್ನು ವೆಂಕಟರಮಣಪ್ಪ ಮತ್ತು ತಿಮ್ಮರಾಯಪ್ಪ ಒಟ್ಟಿಗೆ ಕಟ್ಟಿದ್ದಾರೆ. ಯಾವ ವರ್ಷ ಕಟ್ಟಿದ್ದಾರೆ ನನಗೆ ಗೊತ್ತಿಲ್ಲ.

ಗವಿಯಪ್ಪನಿಗೆ 7–8 ಕಡೆ ಜಮೀನುಗಳು ಇದ್ದವು. ಸದರಿ ಜಮೀನುಗಳು ಯಾವ ಊರಿನಲ್ಲಿ ಇದ್ದವು ನನಗೆ ಗೊತ್ತಿಲ್ಲ. ಸದರಿ ಸ್ವತ್ತುಗಳು ಗವಿಯಪ್ಪನ ತಂದೆಗೆ ಸೇರಿದ್ದವು. ಗವಿಯಪ್ಪನ ತಂದೆ ಹೆಸರಿನಲ್ಲಿ ಸ್ವತ್ತುಗಳು ಇದ್ದ ಬಗ್ಗೆ ನಾನು ದಾಖಲಾತಿ ನೋಡಿಲ್ಲ. ಊರಲ್ಲಿ ಎಲ್ಲರು ಗವಿಯಪ್ಪನ ತಂದೆಯಿಂದ ಬಂದ ಸ್ವತ್ತುಗಳು ಎಂದು ಹೇಳುತ್ತಿದ್ದರು ಅದರ ಮೇರೆಗೆ ನಾನು ಹೇಳುತ್ತಿದ್ದೇನೆ. ಎಷ್ಟು ಜಮೀನುಗಳಿಗೆ ಈ ದಾವೆ ಸಲ್ಲಿಸಿದ್ದಾರೆ ಗೊತ್ತಿಲ್ಲ. ದಾವಾ ಜಮೀನುಗಳನ್ನು ನಾನು ನೋಡಿಲ್ಲ. ದಾವಾ ಜಮೀನುಗಳ ಸರ್ವೆ ನಂಬರ್, ವಿಸ್ತೀರ್ಣ, ಚಕ್ ಬಂದಿ ಗೊತ್ತಿಲ್ಲ. ಐಟಂ ನಂ 4 ನ್ನು ನಾನು ನೋಡಿಲ್ಲ. ದಾವಾ ಐಟಂ ನಂ 5 ನ್ನು ನಾನು ನೋಡಿಲ್ಲ. ದಾವಾ ಜಮೀನುಗಳು ಎಲ್ಲಿ ಎಲ್ಲಿ ಇವೆ ನಾನು ನೋಡಿಲ್ಲ.

ನಾನು 5 ನೇ ಪ್ರತಿವಾದಿಯನ್ನು ನೋಡಿಲ್ಲ. ಚೇತನ ಆಂಗ್ಲ ಮಾಧ್ಯಮ ಶಾಲೆಯನ್ನು ನಾನು ನೋಡಿದ್ದೇನೆ. ಸದರಿ ಶಾಲೆ K.R.ಬಡವಾಣೆಯಲ್ಲಿ ಇದೆ. ಶಾಲಾ ಕಟ್ಟಡ ಕಟ್ಟಿ ಎಷ್ಟು ವರ್ಷ ಆಯಿತು ನನಗೆ ಗೊತ್ತಿಲ್ಲ. ಸದರಿ ಕಟ್ಟಡವನ್ನು 2011 ರಲ್ಲಿ ಕಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. 5 ನೇ ಪ್ರತಿವಾದಿ ಸದರಿ ಶಾಲೆಯ ಸಂಸ್ಥಾಪಕ ಕಾರ್ಯದರ್ಶಿ ಎಂದರೆ ಇರಬಹುದು. ಸದರಿ ಶಾಲಾ ಕಟ್ಟಡ ಎಷ್ಟು ಗುಂಟೆ ವಿಸ್ತೀರ್ಣದಲ್ಲಿ ಇದೆ ನನಗೆ ಗೊತ್ತಿಲ್ಲ. ದಾವಾ ಐಟಂ ನಂ 6 ರಲ್ಲಿ 10 ಗುಂಟೆ ವಿಸ್ತೀರ್ಣದಲ್ಲಿ ಶಾಲಾ ಕಟ್ಟಡ ಇದೆ ಎಂದರೆ ನನಗೆ

ಗೊತ್ತಿಲ್ಲ. ಸದರಿ ಶಾಲಾ ಕಟ್ಟಡ ರಾಘವೇಂದ್ರ ಕಾಲೋನಿಯಲ್ಲಿ ಇದೆ ಎಂದರೆ ಸರಿ. ಶಾಲೆಯ ಸುತ್ತ ಮುತ್ತ ವಾಸದ ಮನೆಗಳು ಆಗಿವೆ ಎಂದರೆ ಸರಿ. ಅಲ್ಲಿ ಯಾವುದೇ ವ್ಯವಸಾಯದ ಜಮೀನು ಇಲ್ಲ.

ಗವಿಯಪ್ಪ ಬದುಕಿದ್ದಾಗ ಆತನ ಸ್ವತ್ತುಗಳ ಸಂಬಂಧ ಏನು ಏನು ವ್ಯವಹಾರ ಮಾಡಿದ್ದ ನನಗೆ ಗೊತ್ತಿಲ್ಲ. ನಾನು S.S.L.C ಓದುವಾಗ ಗವಿಯಪ್ಪ ತೀರಿ ಹೋಗಿದ್ದಾರೆ. 1983–84 ರಲ್ಲಿ ನಾನು S.S.L.C ಪಾಸ್ ಆಗಿದ್ದೇನೆ. ಅದರ ಹಿಂದೆ ಮುಂದಿನ ವರ್ಷದಲ್ಲಿ ಗವಿಯಪ್ಪ ತೀರಿ ಹೋಗಿದ್ದಾರೆ. ವೆಂಕಟರಮಣಪ್ಪ ಮತ್ತು ತಿಮ್ಮರಾಯಪ್ಪ ಎರಡು ಪ್ರತ್ಯೇಕ ಮನೆಗಳಲ್ಲಿ ವಾಸ ಇದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಒಂದೇ ಮನೆಯಲ್ಲಿ ವಾಸ ಇದ್ದರು. ಅದರಲ್ಲಿ ಭಾಗ ಮಾಡಿಕೊಂಡಿದ್ದರು ಅಥವಾ ಇಲ್ಲ ನನಗೆ ಗೊತ್ತಿಲ್ಲ. ಗವಿಯಪ್ಪ ತನ್ನ ಮಕ್ಕಳಿಗೆ ಯಾವ ರೀತಿ ಆಸ್ತಿ ಕೊಟ್ಟರು ನನಗೆ ಗೊತ್ತಿಲ್ಲ. ವೆಂಕಟರಮಣಪ್ಪ ಮತ್ತು ತಿಮ್ಮರಾಯಪ್ಪ ತಮ್ಮ ಜೀವತಾವಧಿಯಲ್ಲಿ ಯಾವ ಯಾವ ವ್ಯವಹಾರ ಮಾಡಿದ್ದಾರೆ ಮತ್ತು ಯಾವ ಯಾವ ಪತ್ರ ವ್ಯವಹಾರ ಮಾಡಿರುತ್ತಾರೆ ನನಗೆ ಗೊತ್ತಿಲ್ಲ ವೆಂಕಟರಮಣಪ್ಪ ಮತ್ತು ತಿಮ್ಮರಾಯಪ್ಪ ರವರ ಜಮೀನುಗಳ ಪಕ್ಕ ನನ್ನ ಜಮೀನು ಇಲ್ಲ. ಆ ಕಾರಣದಿಂದಾಗಿ ಸದರಿ ಜಮೀನುಗಳನ್ನು ಹೋಗಿ ನೋಡುವ ಪ್ರಮೇಯ ನನಗೆ ಇಲ್ಲ ಎಂದರೆ ಸರಿ. ನಾನು ತುಮಕೂರು ಶ್ರೀದೇವಿ ಆಸ್ಪತ್ರೆಯಲ್ಲಿ ಕಳೆದ 6 ವರ್ಷಗಳಿಂದ ಸಹಾಯಕನಾಗಿ ಕೆಲಸ ಮಾಡುತ್ತಿದ್ದೇನೆ. ನಾನು ಮಧುಗಿರಿಯಲ್ಲಿ ವಾಸ ಇದ್ದೇನೆ. ಆಸ್ಪತ್ರೆಗೆ ಹೋಗಿ ಬಂದು

ಮಾಡುತ್ತೇನೆ. ನಾನು ಮಧುಗಿರಿಯ ಸ್ವಂತ ಮನೆಯಲ್ಲಿ ವಾಸ ಇದ್ದೇನೆ.

ತಿಮ್ಮರಾಯಪ್ಪ ತೀರಿ ಹೋದಾಗ ನನಗೆ 14–15 ವರ್ಷ ವಯಸ್ಸು. ವೆಂಕಟರಮಣಪ್ಪ ತೀರಿ ಹೋದಾಗ ನನಗೆ 10–12 ವರ್ಷ ವಯಸ್ಸು. ನಾನು ಚಿಕ್ಕ ವಯಸ್ಸಿನವನಾಗಿದ್ದ ಕಾರಣ ವೆಂಕಟರಮಣಪ್ಪ ಮತ್ತು ತಿಮ್ಮರಾಯಪ್ಪ ರವರ ವ್ಯವಹಾರದ ಬಗ್ಗೆ ಮತ್ತು ಜಮೀನುಗಳ ಬಗ್ಗೆ ಗೊತ್ತಿಲ್ಲ ಎಂದರೆ ಸರಿ. ವೆಂಕಟರಮಣಪ್ಪ ಮತ್ತು ತಿಮ್ಮರಾಯಪ್ಪ ಒಟ್ಟಿಗೆ ಇದ್ದ ಬಗ್ಗೆ ರೇಷನ್ ಕಾರ್ಡ್ ನಾನು ನೋಡಿಲ್ಲ. 1 ನೇ ವಾದಿ ಯಲಹಂಕ ಬೆಂಗಳೂರಿನಲ್ಲಿ ವಾಸ ಇದ್ದಾಳೆ. 2 ನೇ ವಾದಿ ಚಿಕ್ಕಬಳ್ಳಾಪುರದಲ್ಲಿ ವಾಸ ಇದ್ದಾಳೆ. ನಾನು ವಾದಿಯರ ಮನೆಗಳನ್ನು ನೋಡಿಲ್ಲ. ವಾದಿಯರು ಮದುವೆ ಆದಾಗಿನಿಂದ ಗಂಡನ ಮನೆಗಳಲ್ಲಿ ವಾಸ ಇದ್ದಾರೆ. ಅವರ ಗಂಡಂದಿರು ಮತ್ತು ಮಕ್ಕಳ ಬಗ್ಗೆ ನನಗೆ ಗೊತ್ತಿಲ್ಲ. ಯಾರು ಯಾರಿಗೆ ಯಾವ ಸ್ವತ್ತುಗಳನ್ನು ಮಾರಾಟ ಮಾಡಿದರು ನನಗೆ ಗೊತ್ತಿಲ್ಲ. ಯಾವ ಯಾವ ದಾವಾ ಸ್ವತ್ತುಗಳಲ್ಲಿ ಯಾರು ಯಾರು ಸ್ವಾಧೀನದಲ್ಲಿ ಇದ್ದಾರೆ ನನಗೆ ಗೊತ್ತಿಲ್ಲ. ವಾದಿಯರು ಕೇಳಿದ ಮೇರೆಗೆ ನಾನು ಸಾಕ್ಷ್ಯ ನುಡಿಯಲು ಬಂದಿದ್ದೇನೆ. ಇದೇ ರೀತಿ ಸಾಕ್ಷಿ ಹೇಳಿ ಎಂದು ವಾದಿಯರು ನನಗೆ ಹೇಳಿದ ಮೇರೆಗೆ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಎರಡು ವರ್ಷಗಳಿಂದ ಶ್ರೀದೇವಿ ಆಸ್ಪತ್ರೆಗೆ ಹೋಗಿಲ್ಲ. ನನಗೆ ಬೇರೆ ಉದ್ಯೋಗ ಇಲ್ಲ ಎಂದರೆ ಆಸ್ಪತ್ರೆಯವರು ಕರೆಯುತ್ತಿದ್ದಾರೆ ಎಂದು ಹೇಳುತ್ತಾರೆ. ನಾನು

ಇದೇ ಮೊದಲ ಬಾರಿ ನ್ಯಾಯಾಲಯದಲ್ಲಿ ಸಾಕ್ಷಿ ಹೇಳುತ್ತಿದ್ದೇನೆ. ನಾನು ವಾದಿಯರ ಬಳಿ ಹಣ ಪಡೆದುಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಗವಿಯಪ್ಪ ತೀರಿಹೋದಾಗ ಅವರ ಮಕ್ಕಳಿಗೆ ಎಷ್ಟು ವಯಸ್ಸಾಗಿತ್ತು ನನಗೆ ಗೊತ್ತಿಲ್ಲ. ಗವಿಯಪ್ಪರವರಿಗೆ ಯಾವುದೇ ಪಿತ್ರಾರ್ಜಿತ ಸ್ವತ್ತುಗಳು ಇರಲಿಲ್ಲ ಎಂದರೆ ಸರಿಯಲ್ಲ. ಗವಿಯಪ್ಪ ತೀರಿ ಹೋದ ನಂತರ ವೆಂಕಟರಮಣಪ್ಪ ಮತ್ತು ತಿಮ್ಮರಾಯಪ್ಪ ಸ್ವತ್ತುಗಳನ್ನು ವಿಭಾಗ ಮಾಡಿಕೊಂಡು ಪ್ರತ್ಯೇಕ ಸ್ವಾಧೀನದಲ್ಲಿ ಇದ್ದರು ಎಂದರೆ ಸರಿಯಲ್ಲ. ವೆಂಕಟರಮಣಪ್ಪ ತನ್ನ ಭಾಗದ ಸ್ವತ್ತುಗಳನ್ನು ತನ್ನ ಮಗಳು ಭಾಗ್ಯಮ್ಮರವರಿಗೆ ವಿಲ್ ಮೂಲಕ ಬರೆದುಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ವೆಂಕಟರಮಣಪ್ಪ ತೀರಿ ಹೋದ ಮೇಲೆ ಭಾಗ್ಯಮ್ಮ ಒಬ್ಬಳೇ ಸದರಿ ಸ್ವತ್ತುಗಳನ್ನು ಅನುಭವಿಸುತ್ತಿದ್ದಳು ಎಂದರೆ ಸರಿಯಲ್ಲ. ವೆಂಕಟರಮಣ್ಣ ರವರು ವಯಸ್ಸಾಗಿ ತೀರಿ ಹೋಗಿದ್ದಾರೆ. ವೆಂಕಟರಮಣಪ್ಪರವನ್ನು ಬೆಂಗಳೂರು ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿದ ನಂತರ ಕ್ಯಾನ್ಸರ್ ಕಾಯಿಲೆಯಿಂದ ತೀರಿ ಹೋಗಿದ್ದಾರೆ. ಭಾಗ್ಯಮ್ಮ ತನ್ನ ತಂದೆಗೆ ಚಿಕಿತ್ಸೆ ಕೊಡಿಸಿದಳು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಎಲ್ಲರೂ ಸೇರಿ ಒಟ್ಟು ಕುಟುಂಬದ ಪರವಾಗಿ ಚಿಕಿತ್ಸೆ ಕೊಡಿಸಿದ್ದಾರೆ ಎಂದು ಹೇಳುತ್ತಾರೆ. ವೆಂಕಟರಮಣಪ್ಪನ ಚಿಕಿತ್ಸೆಗೆ ಲಕ್ಷಾಂತರ ರೂ. ಖರ್ಚು ಮಾಡಿದ್ದಾರೆ ಎಂದರೆ ಸರಿ. ಸಾಲ ಮಾಡಿ ಆಸ್ಪತ್ರೆಗೆ ಖರ್ಚು ಮಾಡಿದ್ದ ಸಾಲ ತೀರಿಸುವ ಸಲುವಾಗಿ ಭಾಗ್ಯಮ್ಮ ತನಗೆ ವಿಲ್ ಮೂಲಕ ಬಂದಿದ್ದ ಸ್ವತ್ತುಗಳನ್ನು ಮಾರಾಟ ಮಾಡಿದ್ದಾರೆ ಎಂದರೆ ಸರಿ.

ಗವಿಯಪ್ಪ, ವೆಂಕಟರಮಣಪ್ಪ ಮತ್ತು ತಿಮ್ಮರಾಯಪ್ಪ ರವರ ಕುಟುಂಬದ ಬಗ್ಗೆ ಅವರ ವ್ಯವಹಾರಗಳ ಬಗ್ಗೆ ಮತ್ತು ದಾವಾ ಸ್ವತ್ತುಗಳ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. 1 ನೇ ವಾದಿ ಹೇಳಿಕೊಟ್ಟ ಮೇರೆಗೆ ಕಂಠಪಾಠ ಮಾಡಿಕೊಂಡು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ನಾನು ಓದಿ ನೋಡಿಲ್ಲ ಚಂದ್ರಕಲಾ ಹೇಳಿ ಬರೆಯಿಸಿದ ಮುಖ್ಯ ವಿಚಾರಣಾ ಪ್ರಮಾಣ ಪತ್ರಕ್ಕೆ ನಾನು ಸಹಿ ಹಾಕಿದ್ದೇನೆ ಎಂದರೆ ಸರಿ. ನಾನು ವಾದಿಯರಿಗೆ ಸಹಾಯ ಮಾಡುವ ಉದ್ದೇಶದಿಂದ ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ

ಮರು ವಿಚಾರಣೆ ಇಲ್ಲ.

(ತೆ.ನ್ಯಾ.ನ.ಉ.ಲೇ.ಬೆ.ಮಾ.) ಓ.ಹೇ.ಕೇ. ಸ.ಇ.

ಅಧಿಕ ಹಿರಿಯ ಸಿವಿಲ್ ಜಡ್ಜ ಮತ್ತು ಜೆ.ಎಂ.ಎಫ್.ಸಿ
ಮಧುಗಿರಿ .